**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3391 / 2022**

**ಚಾಸಾ ಃ- 15 / ಪ್ರಾಸಾ ಃ- 06**

| | |
|---|---|
| ಹೆಸರು | ರವಿ ಬಿ |
| ತಂದೆಯ / ಗಂಡನ ಹೆಸರು | **ಬೆಟ್ಟಯ್ಯ** |
| ವಯಸ್ಸು | **49** |
| ಉದ್ಯೋಗ | **Traffic Inspector, cubbon park Police Station.** |
| ವಿಳಾಸ | **ಬೆಂಗಳೂರು** |

**ದಿನಾಂಕಃ 19.09.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಜೂನ್ 2021 ರಿಂದ ಆಗಸ್ಟ್ 2023 ರ ವರೆಗೆ ಮಾಗಡಿ ಪೋಲಿಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. .

ದಿನಾಂಕ 04.03.2022 ರಂದು ಚಾಸಾ 14 ರವರಿಂದ ಪ್ರಕರಣದ ಕಡತವನ್ನು ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ಚಾಸಾ 13 ರವರಿಗೆ ಕಲಂ 133 ಐಎಂ ವಿ ಅಡಿಯಲ್ಲಿ ನೋಟೀಸನ್ನು ಜಾರಿ ಮಾಡಿರುತ್ತೇನೆ. ಅದೇ ದಿನ ಚಾಸಾ 13 ರವರು ಠಾಣೆಗೆ ಹಾಜರಾಗಿ ಕಲಂ 133 ನೋಟೀಸಿಗೆ ಉತ್ತರವನ್ನು ನೀಡಿರುತ್ತಾರೆ ಹಾಗೂ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿ ಪುಟ್ಟರಾಜುರವರನ್ನು ಹಾಜರು ಪಡಿಸಿದ್ದು ಅವರನ್ನು ದಸ್ತಗಿರಿ ಮಾಡಿ ಸ್ವಇಚ್ಛಾ ಹೇಳಿಕೆ ಪಡೆದು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಐಎಂವಿ ತಪಾಸಣೆ ನಂತರ ವಾಹನವನ್ನು ಚಾಸಾ 13 ರವರಿಗೆ ಇಂಡಿಮಿನಿಟಿ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ. ಚಾಸಾ 12 ರವರು ಆರೋಪಿ ವಾಹನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರು ಪಡಿಸಿದ್ದು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ 09.03.2022 ರಂದು ಚಾಸಾ 10 ರವರಿಂದ ಮೃತನ ಪಿ ಎಂ ವರಧಿಯನ್ನು ಪಡೆದುಕೊಂಡಿರುತ್ತೇನೆ. ಚಾಸಾ 11 ರವರಿಂದ ಐಎಂ ವಿ ವರಧಿಯನ್ನು ಪಡೆದುಕೊಂಡಿರುತ್ತೇನೆ. ನಂತತರ ಅದೇ ದಿನ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರಧಿಯನ್ನು ದಾಖಲಿಸಿಕೊಂಡಿರುತ್ತೇನೆ.

ಈಗ ಸಾಕ್ಷಿಗೆ ಪಿ ಎಂ ವರಧಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪಿ ಎಂ ವರಧಿಯನ್ನು ನಿಪಿ-11ಎಂದು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಐಎಂ ವಿ ವರಧಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಐ ಎಂ ವಿ ವರಧಿಯನ್ನು ನಿಪಿ-12ಎಂದು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಕಲಂ 133 ನೋಟೀಸನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನೋಟೀಸನ್ನು ನಿಪಿ-13 ಎಂದು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಕಲಂ 133 ನೋಟೀಸಿನ ಉತ್ತರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಉತ್ತರವನ್ನು ನಿಪಿ-14 ಎಂದು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಇಂಡಿಮಿನಿಟಿ ಬಾಂಡ್ ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಬಾಂಡ್ ಅನ್ನು ನಿಪಿ-15 ಎಂದು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ದಿನಾಂಕ 04.03.2022 ರಂದು ಘಟಕ ವ್ಯವಸ್ಥಾಪಕರು ರಸ್ತೆ ಸಾರಿಗೆ ನಿಗಮ ಮಾಗಡಿಯವರು ನೀಡಿದ ಅರ್ಜಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಅರ್ಜಿಯನ್ನು ನಿಪಿ-16 ಎಂದು ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಧೃಡೀಕರಣ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಧೃಡೀಕರಣ ಪತ್ರವನ್ನು ನಿಪಿ-17 ಎಂದು ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು

ಗುರುತಿಸಲಾಯಿತು. ಈಗ ಸಾಕ್ಷಿಗೆ ದಿನಾಂಕ 03.03.2022 ರಂದು ವಿಭಾಗೀಯ ಸಂಚಲನಾಧಿಕಾರಿ, ರಾಮನಗರ ವಿಭಾಗದವರು ನೀಡಿದ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪತ್ರವನ್ನು ನಿಪಿ-18 ಎಂದು ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಫಾರಂ ನಂ.38 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಫಾರಂ ನಂ.38 ಅನ್ನು ನಿಪಿ-19 ಎಂದು ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ವಾಹನದ ಆಯಾದಿನದ ನಿವೇದನ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿವೇದನ ಪತ್ರವನ್ನು ನಿಪಿ-20 ಎಂದು ಸಾಕ್ಷಿಯ ಸಹಿಯನ್ನು ನಿಪಿ-20 (ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಸಾಕ್ಷಿಯ ನ್ಯಾಯಾಲಯದಲ್ಲಿರುವ ಆರೋಪಿಯನ್ನು ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್ ಎಸ್ ವಕೀಲರಿಂದಃ**

ಹುಲಿಯೂರುದುರ್ಗ ಮಾಗಡಿ ರಸ್ತೆ ಪೂರ್ವ ಪಶ್ಚಿಮ ರನ್ ಆಗುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ಉತ್ತರಕ್ಕೆ ಸಾತನೂರು ರಸ್ತೆ ಹಾಗೂ ದಕ್ಷಿಣಕ್ಕೆ ಭೈರನಹಳ್ಳಿ ರಸ್ತೆ ಇದೆ ಎಂದರೆ ಸಾಕ್ಷಿ ಇಲ್ಲ ಉತ್ತರ ದಕ್ಷಿಣ ಹುಲಿಯೂರುದುರ್ಗ ಮಾಗಡಿ ರಸ್ತೆ ಎಂದು ನುಡಿಯುತ್ತಾರೆ. ಮೃತ ಚನ್ನಯ್ಯ ರವರ ದ್ವಿಚಕ್ರ ವಾಹನದ ದಾಖಲೆಗಳನ್ನು ಹಾಗೂ ಅವರ ಚಾಲನಾ ಪರವಾನಗಿಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಕೇಳಲಾಗಿ ಅವರು ಹಾಜರು ಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಮೃತ ಚನ್ನಯ್ಯ ರವರು ತಮ್ಮ ದ್ವಿಚಕ್ರ ವಾಹನವನ್ನು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿಕೊಂಡು ಹುಲಿಯೂರುದುರ್ಗ - ಮಾಗಡಿ ರಸ್ತೆಯನ್ನು ಅಕ್ಕ ಪಕ್ಕ ಬರುವ ವಾಹನಗಳನ್ನು ಗಮನಿಸದೆ ಕ್ರಾಸ್ ಮಾಡುವಾಗ ಕೆ ಎಸ್ ಆರ್ ಟಿ ಸಿ ಬಸ್ಸಿ ಗೆ ಡಿಕ್ಕಿ ಪಡಿಸಿಕೊಂಡಿದ್ದು ಅವರ ಕುಟುಂಬಕ್ಕೆ ಅನುಕೂಲವಾಗಲಿ ಎಂದು ಕೆ ಎಸ್ ಆರ್ ಟಿ ಸಿ ಬಸ್ಸಿ ನ ಚಾಲಕನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಯು ನಿಮಗೆ ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಅದೇ ರೀತಿ ಚಾಸಾ 13 ಹಾಗೂ ಇತರರು ನಿಮಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮೃತರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ಅಂತಿಮ ವರಧಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**